ಕಂದಾಯ ಇಲಾಖೆ ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಯವರ ಕಛೇರಿ, ರಜತಾದ್ರಿ, ಉಡುಪಿ ಜಿಲ್ಲೆ, -576104

Office : 0820 -2574925/(O), 2574926( F), Election :0820-2574920/2574991(O), 2574920(F)
E-Mail: deo.udupi @ gmail.com Website: udupi.nic.in

ನಂ: ಇಎಲ್‌ಎನ್(2 ) ಸಿಆರ್ : 16 /2018-2019 ದಿನಾಂಕ. 10.08.2018

ಪ್ರಪತ್ರ -1

(ನಿಯಮ 8(1) ನೋಡಿ)

## ಅಧಿಸೂಚನೆ

1964 ರ ಕರ್ನಾಟಕ ಪೌರಸಭೆಗಳ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಸ್ಥಾಪಿತವಾದ ಉಡುಪಿ ಜಿಲ್ಲೆಯ ಉಡುಪಿ ನಗರಸಭೆ ಹಾಗೂ ಕುಂದಾಪುರ ಮತ್ತು ಕಾರ್ಕಳ ಪುರಸಭೆ ಮತ್ತು ಸಾಲಿಗ್ರಾಮ ಪಟ್ಟಣ ಪಂಚಾಯತಿ ಕೌನ್ಸಿಲರುಗಳ ಸ್ಥಾನಗಳನ್ನು ಈ ಅಧಿಸೂಚನೆಯ ಅನುಬಂಧ ಎ, ಬಿ, ಸಿ, ಡಿ ರಲ್ಲಿ ಹೇಳಿದ ಉಡುಪಿ ನಗರಸಭೆಯ 35 ವಾರ್ಡುಗಳ ಸದಸ್ಯ ಸ್ಥಾನಗಳಿಗೆ/ ಕುಂದಾಪುರ ಪುರಸಭೆಯ 23 ವಾರ್ಡುಗಳ ಮತ್ತು ಕಾರ್ಕಳ ಪುರಸಭೆಯ 23 ವಾರ್ಡ್‌ಗಳ ಹಾಗೂ ಸಾಲಿಗ್ರಾಮ ಪಟ್ಟಣ ಪಂಚಾಯತಿನ 16 ವಾರ್ಡುಗಳ ಸದಸ್ಯ ಸ್ಥಾನಗಳನ್ನು ತುಂಬಲು ಚುನಾವಣೆ ನಡೆಸಬೇಕಾಗಿರುವುದರಿಂದ

ಕರ್ನಾಟಕ ಪೌರಸಭೆಗಳ (ಕೌನ್ಸಿಲರುಗಳು ಚುನಾವಣೆ) ನಿಯಮಗಳು 1977ರ ನಿಯಮ 8ರ ಅನುಸಾರವಾಗಿ ಹಾಗೂ ರಾಜ್ಯ ಚುನಾವಣಾ ಆಯೋಗದ ಆದೇಶ ನಂ. ರಾಚುಆ 30 ಇಯುಬಿ 2018 ಬೆಂಗಳೂರು ದಿನಾಂಕ: 02.08.2018 ರಂತೆ ಉಡುಪಿ ಜಿಲ್ಲೆಯ ಜಿಲ್ಲಾಧಿಕಾರಿಯಾದ ಶ್ರೀಮತಿ ಪ್ರಿಯಾಂಕ ಮೇರಿ ಫ್ರಾನ್ಸಿಸ್, ಭಾ.ಆ.ಸೇ. ಎಂಬ ಹೆಸರಿನ ನಾನು ಉಡುಪಿ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ನಗರ ಸ್ಥಳೀಯ ಸಂಸ್ಥೆಗಳಾದ ಉಡುಪಿ ನಗರ ಸಭೆಯ 35 ವಾರ್ಡುಗಳಿಗೆ, ಕುಂದಾಪುರ ಪುರಸಭೆಯ 23 ವಾರ್ಡುಗಳಿಗೆ, ಕಾರ್ಕಳ ಪುರಸಭೆಯ 23 ವಾರ್ಡುಗಳಿಗೆ ಮತ್ತು ಸಾಲಿಗ್ರಾಮ ಪಟ್ಟಣ ಪಂಚಾಯತಿನ 16 ವಾರ್ಡುಗಳಿಗೆ ಸಾರ್ವತ್ರಿಕ ಚುನಾವಣೆಯನ್ನು ನಡೆಸಲು ಈ ಕೆಳಕಂಡ ಚುನಾವಣಾ ವೇಳಾ ಪಟ್ಟಿಯನ್ನು ನಿಗದಿಪಡಿಸಿ ಆದೇಶ ಹೊರಡಿಸಿರುತ್ತೇನೆ. ಈ ಚುನಾವಣೆಯು ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ:50ಎಂಎಲ್ ಆರ್2018(1) ದಿನಾಂಕ:30.07.2018ರಲ್ಲಿ ನಿಗದಿಪಡಿಸಿರುವ ವಾರ್ಡುವಾರು ಮೀಸಲಾತಿಯು ಅನುಬಂಧ ನಮೂನೆ -1ರ ಎ,ಬಿ,ಸಿ,ಡಿ. ರಲ್ಲಿ ತಿಳಿಸಿರುವಂತೆ ಇರುತ್ತದೆ.

| | | | |
|---|---|---|---|
| 1 | ನಾಮಪತ್ರಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ದಿನ | 17.08.2018 | ಶುಕ್ರವಾರ |
| 2 | ನಾಮಪತ್ರಗಳನ್ನು ಪರಿಶೀಲಿಸುವ ದಿನಾಂಕ ಮತ್ತು ದಿನ | 18.08.2018 | ಶನಿವಾರ |
| 3 | ಉಮೇದುವಾರಿಕೆಗಳನ್ನು ಹಿಂತೆಗೆದುಕೊಳ್ಳುವ ಕೊನೆಯ ದಿನಾಂಕ ಮತ್ತು ದಿನ | 20.08.2018 | ಸೋಮವಾರ |
| **4** | **ಮತದಾನ ಅವಶ್ಯವಿದ್ದರೆ ಮತದಾನವನ್ನು ನಡೆಸಬೇಕಾದ ದಿನಾಂಕ ಮತ್ತು ದಿನ (ಮತದಾನದ ಸಮಯ ಬೆಳಿಗ್ಗೆ 7-00 ಗಂಟೆಯಿಂದ ಸಂಜೆ 5-00 ಗಂಟೆಯವರೆಗೆ)** | **29.08.2018** | ಬುಧವಾರ |
| 5 | ಮರು ಮತದಾನ ಅವಶ್ಯವಿದ್ದಲ್ಲಿ ಮತದಾನ ನಡೆಯುವ ದಿನಾಂಕ ಮತ್ತು ದಿನ | 31.08.2018 | ಶುಕ್ರವಾರ |
| 6 | ಮತ ಎಣಿಕೆ ದಿನಾಂಕ ಮತ್ತು ದಿನ ಬೆಳಿಗ್ಗೆ 8.00 ಗಂಟೆಯಿಂದ (ತಾಲೂಕಿನ ಕೇಂದ್ರ ಸ್ಥಳದಲ್ಲಿ) | 03.09.2018 | ಸೋಮವಾರ |
| 7 | ಚುನಾವಣೆಯನ್ನು ಯಾವ ದಿನಾಂಕಕ್ಕೆ ಮುಂಚೆ ಮುಕ್ತಾಯಗೊಳಿಸಬೇಕೋ ಆ ದಿನಾಂಕ ಮತ್ತು ದಿನ | 03.09.2018 | ಸೋಮವಾರ |

( ಪ್ರಿಯಾಂಕ ಮೇರಿ ಫ್ರಾನ್ಸಿಸ್, ಭಾ.ಆ.ಸೇ.)
ಜಿಲ್ಲಾಧಿಕಾರಿ ಹಾಗೂ
ಜಿಲ್ಲಾ ಚುನಾವಣಾಧಿಕಾರಿ
ನಗರ ಸ್ಥಳೀಯ ಸಂಸ್ಥೆಗಳ ಸಾರ್ವತ್ರಿಕ ಚುನಾವಣೆ
ಉಡುಪಿ ಜಿಲ್ಲೆ, ಉಡುಪಿ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ:50ಎಂಎಲ್ ಆರ್2018(1) ದಿನಾಂಕ:30.07.2018ರಲ್ಲಿ ನಿಗದಿಪಡಿಸಿರುವ ವಾರ್ಡುವಾರು ಮೀಸಲಾತಿಯಂತೆ

## ಅನುಬಂಧ 1 – ಡಿ

**ಸಾಲಿಗ್ರಾಮ ಪಟ್ಟಣ ಪಂಚಾಯತ್** **ಒಟ್ಟು ವಾರ್ಡುಗಳು :16**

| ವಾರ್ಡು ಸಂಖ್ಯೆ | ವಾರ್ಡಿನ ಹೆಸರು | ಮೀಸಲಾತಿ |
|---|---|---|
| 1 | 2 | 3 |
| 1 | ಪಡುಕೆರೆ | ಹಿಂದುಳಿದ ವರ್ಗ (ಎ) ಮಹಿಳೆ |
| 2 | ವಿಷ್ಣುಮೂರ್ತಿ | ಸಾಮಾನ್ಯ ಮಹಿಳೆ |
| 3 | ಗೆಂಡೆಕೆರೆ | ಸಾಮಾನ್ಯ |
| 4 | ತೋಡಕಟ್ಟು | ಹಿಂದುಳಿದ ವರ್ಗ (ಎ) |
| 5 | ಕಾರ್ತಟ್ಟು | ಸಾಮಾನ್ಯ |
| 6 | ಮಾರಿಗುಡಿ | ಹಿಂದುಳಿದ ವರ್ಗ (ಬಿ) |
| 7 | ಪೇಟೆ | ಹಿಂದುಳಿದ ವರ್ಗ (ಎ) ಮಹಿಳೆ |
| 8 | ಬಡಾಹೋಳಿ | ಪರಿಶಿಷ್ಟ ಜಾತಿ |
| 9 | ಮೂಡೋಳಿ | ಸಾಮಾನ್ಯ |
| 10 | ತೆಂಕುಹೋಳಿ | ಸಾಮಾನ್ಯ ಮಹಿಳೆ |
| 11 | ಪಡುಹೋಳಿ | ಹಿಂದುಳಿದ ವರ್ಗ (ಎ) |
| 12 | ಭಗವತಿ | ಪರಿಶಿಷ್ಟ ಪಂಗಡ |
| 13 | ಪಾತಾಳಬೆಟ್ಟು | ಸಾಮಾನ್ಯ |
| 14 | ದೊಡ್ಮನೆಬೆಟ್ಟು | ಸಾಮಾನ್ಯ ಮಹಿಳೆ |
| 15 | ಚೆಲ್ಲಮಕ್ಕಿ | ಸಾಮಾನ್ಯ ಮಹಿಳೆ |
| 16 | ಯಕ್ಷಮಠ | ಸಾಮಾನ್ಯ |

(ಪ್ರಿಯಾಂಕ ಮೇರಿ ಫ್ರಾನ್ಸಿಸ್ ಭಾ. ಆ. ಸೇ)
ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ
ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆ-2018
ಉಡುಪಿ ಜಿಲ್ಲೆ, ಉಡುಪಿ